## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2021-22ನೇ ಸಾಲಿನಲ್ಲಿ ಸಿಡಾಕ್ ಸಂಸ್ಥೆಯ ಯೋಜನೆ/ಕಾರ್ಯಕ್ರಮಗಳನ್ನು ಮುಂದುವರೆಸಲು ಅನುಮತಿ ನೀಡುವ ಕುರಿತು.

**ಓದಲಾಗಿದೆ:**
1. ಸರ್ಕಾರದ ಆದೇಶ ಸಂಖ್ಯೆ: ಕೌಉಜೀಇ 42 ಕೌಗುಇ 2021, ದಿನಾಂಕ: 04.06.2021.
2. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1 ಟಿಎಫ್‌ಪಿ 2021, ದಿನಾಂಕ: 30-09-2021.
3. ನಿರ್ದೇಶಕರು, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್) ಧಾರವಾಡ ಇವರ ಪತ್ರ ಸಂಖ್ಯೆ: ಸಿಡಾಕ್/ನಿ/ಹ.ಲೆ.ವಿ/ಅನುದಾನ-ಮ.ಹಂ./2020-22/456, ದಿನಾಂಕ: 26.10.2021.

******

**ಪ್ರಸ್ತಾವನೆ:**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಆದೇಶದಲ್ಲಿ ಸಿಡಾಕ್ ಸಂಸ್ಥೆಗೆ 2021-22ನೇ ಸಾಲಿನಲ್ಲಿ ಯೋಜನೆಯಡಿ ಹಂಚಿಕೆಯಾಗಿರುವ ಆಯವ್ಯಯದಲ್ಲಿ ಲೆಕ್ಕ ಶೀರ್ಷಿಕೆ: 2230-03-003-0-01-59 ರಡಿ ಇತರೆ ಖರ್ಚುಗಳು ಯೋಜನೆಯಡಿ ಒದಗಿಸಲಾದ ಅನುದಾನ ರೂ.481.00 ಲಕ್ಷಗಳು, ಲೆಕ್ಕ ಶೀರ್ಷಿಕೆ: 2230-03-003-0-01-422ರಡಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಒದಗಿಸಲಾದ ಅನುದಾನ ರೂ.14.00 ಲಕ್ಷಗಳು ಹಾಗೂ ಲೆಕ್ಕ ಶೀರ್ಷಿಕೆ: 2230-03-003-0-01-423ರಡಿ ಗಿರಿಜನ ಉಪ ಯೋಜನೆಯಡಿ ಒದಗಿಸಲಾದ ಅನುದಾನ ರೂ.5.00 ಲಕ್ಷಗಳು ಒಟ್ಟು ರೂ. 500.00 ಲಕ್ಷ (ಐನೂರು ಲಕ್ಷ ರೂಪಾಯಿಗಳು ಮಾತ್ರ) ಗಳ ಅನುದಾನವನ್ನು ಕ್ರಿಯಾ ಯೋಜನೆಯ ಕಾರ್ಯಕ್ರಮಗಳಿಗೆ ಭರಿಸಿಕೊಂಡು ಅನುಷ್ಠಾನಗೊಳಿಸಿ ಮುಂದುವರೆಸಲು ಅನುಮೋದನೆ ನೀಡಲಾಗಿದೆ.

ಮೇಲೆ ಓದಲಾದ (3)ರ ಪತ್ರದಲ್ಲಿ ನಿರ್ದೇಶಕರು, (ಸಿಡಾಕ್) ಧಾರವಾಡ ಇವರು 2021-22ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ ರೂ.500.00 ಲಕ್ಷಗಳ ಆಯವ್ಯಯದಲ್ಲಿ ಕೆಲವೊಂದು ಕಾರ್ಯಕ್ರಮಗಳಲ್ಲಿ ರೂ.5.00 ಲಕ್ಷಗಳು ಉಳಿಕೆಯಾಗಬಹುದೆಂದು ಅಂದಾಜಿಸಲಾಗಿದ್ದು, ಹೀಗೆ ಉಳಿಕೆಯಾಗುವ ಮೊತ್ತ ರೂ.5.00 ಲಕ್ಷಗಳನ್ನು ಮರು ಹಂಚಿಕೆ ಮಾಡಿ ಆಯವ್ಯಯ ಅಂದಾಜನ್ನು ಪರಿಷ್ಕರಿಸಲಾಗಿದ್ದು, ಸದರಿ ಪರಿಷ್ಕೃತ ಆಯವ್ಯಯ ಅಂದಾಜಿಗೆ ಸರ್ಕಾರದ ಅನುಮೋದನೆ ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕೌಉಜೀಇ 42 ಉಜೀಇ 2021, ದಿನಾಂಕ: 28 -12-2021.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರಕ್ಕೆ 2021-22ನೇ ಸಾಲಿನಲ್ಲಿ ಮಂಜೂರಾತಿ ನೀಡಿರುವ ರೂ.500.00 ಲಕ್ಷಗಳ ಆಯವ್ಯಯದಲ್ಲಿ ಕೆಲವೊಂದು ಕಾರ್ಯಕ್ರಮಗಳಲ್ಲಿ ಉಳಿತಾಯವಾಗುವ ರೂ.5.00 ಲಕ್ಷಗಳನ್ನು ಜಿಲ್ಲಾ ಕಛೇರಿಗಳ ಬಾಡಿಗೆಗೆ ರೂ.1.20 ಲಕ್ಷಗಳನ್ನು ಹಾಗೂ ಜಿಲ್ಲಾ ಕಛೇರಿ ಮುದ್ರಣ,

--2

ಲೇಖನ ಸಾಮಗ್ರಿಗಳು, ದೂರವಾಣಿ ಮತ್ತು ವೃತ್ತಿಪರ ಶುಲ್ಕಗಳಿಗೆ ರೂ.3.80 ಲಕ್ಷಗಳ ಆಯವ್ಯಯವನ್ನು ಮರು ಹಂಚಿಕೆ ಮಾಡಿ ಈ ಕೆಳಕಂಡ ಕೋಷ್ಟಕದಲ್ಲಿ ವಿವರಿಸಿದಂತೆ ಕಾರ್ಯಕ್ರಮಗಳಿಗೆ ಭರಿಸಿಕೊಂಡು ಅನುಷ್ಠಾನಗೊಳಿಸಿ ಮುಂದುವರೆಸಲು ಭಾಗಶ: ಪರಿಷ್ಕರಿಸಿ ಆದೇಶಿಸಿದೆ.

**(ರೂ. ಲಕ್ಷಗಳಲ್ಲಿ)**

| ವಿವರಗಳು<br>ಖರ್ಚುಗಳ ವಿವರಗಳು | 2021-22ರ ಆಯವ್ಯಯದಲ್ಲಿ ವಾಸ್ತವಿಕವಾಗಿ ಒದಗಿಸಲಾದ ಮೊತ್ತ | ಪರಿಷ್ಕೃತ ಆಯವ್ಯಯ |
|---|---|---|
| **ಲೆಕ್ಕ ಶೀರ್ಷಿಕೆ: (2230-03-003-0-01-059) ಇತರೆ ಖರ್ಚುಗಳು** | | |
| ಕೇಂದ್ರ ಕಛೇರಿಯ ಸಿಬ್ಬಂದಿ ಕಲ್ಯಾಣ ನಿಧಿ ವೃತ್ತಿಪರ ಸಲಹಾ ಶುಲ್ಕಗಳು | 5.19 | 4.19 |
| ಕೇಂದ್ರ ಕಛೇರಿಯ ಕಾರ್ಯಕ್ರಮಗಳು/ ಇತರೆ ವೃತ್ತಿಪರ ಹಾಗೂ ಸಲಹಾ ಶುಲ್ಕಗಳು | 6.50 | 6.00 |
| ಕೇಂದ್ರ ಕಛೇರಿಯ ಪ್ರಯಾಣ ಭತ್ಯೆ | 6.74 | 5.24 |
| ಕಛೇರಿ ವೆಚ್ಚ, ಮುದ್ರಣ, ಲೇಖನ ಸಾಮಗ್ರಿ, ಗಣಕಯಂತ್ರ ದುರಸ್ತಿ, ದೂರವಾಣಿ, ಗೃಹ ಪರಿಚಾರಕ ಭತ್ಯೆ, ಹಾಗೂ ಇತರೆ ವೆಚ್ಚ. | 8.83 | 7.83 |
| ವಾಹನ ಬಾಡಿಗೆ | 34.00 | 33.00 |
| ಜಿಲ್ಲಾ ಕಛೇರಿಗಳ ಬಾಡಿಗೆ | 0.00 | 1.20 |
| ಜಿಲ್ಲಾ ಕಛೇರಿ ಮುದ್ರಣ ಮತ್ತು ಲೇಖನ ಸಾಮಗ್ರಿಗಳು, ದೂರವಾಣಿ ಮತ್ತು ವೃತ್ತಿಪರ ಶುಲ್ಕಗಳು. | 1.50 | 5.30 |

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2021, ದಿನಾಂಕ:30-09-2021ರಲ್ಲಿ ಸರ್ಕಾರದ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

22/12/2021

(ರಂಗನಾಥ)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

**ಇವರಿಗೆ:**

1. ಮಹಾಲೇಖಪಾಲರು, (ಎ&ಇ), (ಜಿ&ಎಸ್.ಎಸ್.ಎ), (ಇ&ಆರ್.ಎಸ್.ಎ), ಕರ್ನಾಟಕ ಬೆಂಗಳೂರು.
2. ಆಯುಕ್ತರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ, ಬೆಂಗಳೂರು.